98ರಲ್ಲಿ) ಅನುಮೋದನೆ ನೀಡಿದೆ.

ಇ) ತಿಮ್ಮನಹಳ್ಳಿಯಲ್ಲಿ ಸ್ಥಾಪಿಸಲು ಉದ್ದೇಶಿಸಿರುವ 110: 11 ಕೆ.ವಿ. ವಿದ್ಯುತ್ ಉಪ ಕೇಂದ್ರಕ್ಕೆ ಬೇಕಾಗುವ ಭೂಮಿಯನ್ನು ಇನ್ನೂ ಸ್ವಾಧೀನಪಡಿಸಿಕೊಳ್ಳ ಬೇಕಾಗಿರುವುದರಿಂದ, ಈ ವಿದ್ಯುತ್ ಉಪಕೇಂದ್ರ ಕಾಮಗಾರಿಯನ್ನು ಪ್ರಾರಂಭಿಸಲು ಸಾಧ್ಯವಾಗಿರುವುದಿಲ್ಲ. ಹಂದನಕೆರೆ ಗ್ರಾದಲ್ಲಿ 110: 11ಕೆ.ವಿ. ವಿದ್ಯುತ್ ಉಪಕೇಂದ್ರ ಸ್ಥಾಪನೆಗೆ ಪ್ರಸ್ತಾವನೆಗೆ ಮಂಡಳಿಯ ತಾಂತ್ರಿಕ ಸಮಿತಿಯು ಆಗಸ್ಟ್ 98ರಲ್ಲಿ ಅನುಮೋದನೆ ನೀಡಿರುವುದರಿಂದ, ವಿವರವಾದ ಯೋಜನಾ ವರದಿಯನ್ನು ತಯಾರಿಸಿ, ಇದಕ್ಕೆ ಮಂಡಳಿಯ ಆಡಳಿತಾತ್ಮಕ ಮಂಜೂರಾತಿಯನ್ನು ಪಡೆಯಬೇಕಾಗಿದೆ. ಪ್ರಶ್ನೆಯ 'ಅ' ಭಾಗಕ್ಕೆ ನೀಡಿರುವ ಉತ್ತರದಿಂದಾಗಿ ಮತ್ತಿಘಟ್ಟದಲ್ಲಿ ಸಬ್ ಸ್ಟೇಷನ್ ನಿರ್ಮಾಣದ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ತಿಮ್ಮನಹಳ್ಳಿ ಸಬ್-ಸ್ಟೇಷನ್ನಿನ ನಿರ್ಮಾಣಕ್ಕೆ ಬೇಕಾಗಿರುವ ಭೂಮಿಯನ್ನು ಸ್ವಾಧೀನಪಡಿಸಿಕೊಂಡ ನಂತರ, ಪೂರ್ವಭಾವೀ ಕೆಲಸಗಳನ್ನು ಪ್ರಾರಂಭಿಸಲು ಸಾಧ್ಯವಾಗುತ್ತದೆ. ಮತ್ತಿಘಟ್ಟದಲ್ಲಿ ಸಬ್-ಸ್ಟೇಷನ್ ನಿರ್ಮಾಣಕ್ಕೆ ಪ್ರಸ್ತಾವನೆಯೇ ಇಲ್ಲದಿರುವಾಗ, ನಿರ್ಮಾಣವನ್ನು ಪ್ರಾರಂಭಿಸುವ ಪ್ರಶ್ನೆಯು ಉದ್ಭವಿಸುವುದಿಲ್ಲ.

ಉ) ಚಿಕ್ಕನಾಯಕನಹಳ್ಳಿ ಪಟ್ಟಣದ 110: 11ಕೆ.ವಿ. ಸಬ್‌ಸ್ಟೇಷನ್ ಹಾಲಿ ಸಾಮರ್ಥ್ಯ2010 ಎಂವಿಎ ಅಲ್ಲದೇ ಈ ತಾಲ್ಲೂಕಿನ ಹುಳಿಯಾರ್ ಗ್ರಾಮದಲ್ಲಿ ಒಂದು 110: 11 ಕೆ.ವಿ. ಸಬ್ ಸ್ಟೇಷನ್ನಿದ್ದು ಇದರ ಸಾಮರ್ಥ್ಯ 1X10 ಎಂವಿಎ ಈ ತಾಲ್ಲೂಕಿನ ತಿಮ್ಮನಹಳ್ಳಿ ಮತ್ತು ಹಂದನಕೆರೆ ಗ್ರಾಮಗಳಲ್ಲಿಯೂ ತಲಾ 10 ಎಂವಿಎ ಸಾಮರ್ಥ್ಯದ 110: 11ಕೆವಿ ವಿದ್ಯುತ್ ಉಪಕೇಂದ್ರಗಳನ್ನು ಸ್ಥಾಪಿಸಲು ಉದ್ದೇಶಿಸಿರುವುದರಿಂದ ಮತ್ತು ಹುಳಿಯಾರ್ ಉಪಕೇಂದ್ರದ ಹಾಲೀ ಇರುವ 1X10 ಎಂವಿಎ, 110: 11 ಕೆ.ವಿ. ಸಾಮರ್ಥ್ಯವನ್ನು ಇನ್ನೊಂದು 1X10 ಎಂವಿಎ 110: 11ಕೆ.ವಿ. ಅಧಿಕ ಪರಿವರ್ತಕದಿಂದ ಬಲವೃದ್ಧಿಗೊಳಿಸಲು ಉದ್ದೇಶವಿರುವುದರಿಂದ ಚಿಕ್ಕನಾಯಕನಹಳ್ಳಿ ಪಟ್ಟಣದಲ್ಲಿರುವ 110: 11ಕೆ.ವಿ. ವಿದ್ಯುತ್ ಉಪ ಕೇಂದ್ರದ ಸಾಮರ್ಥ್ಯವನ್ನು ಹೆಚ್ಚಳಗೊಳಿಸುವ ಅವಶ್ಯಕತೆ ಸಧ್ಯಕ್ಕೆ ಇರುವುದಿಲ್ಲ.

ಊ) ಇದು ಉದ್ಭವಿಸುವುದಿಲ್ಲ.

ಚಿಕ್ಕನಾಯಕನಹಳ್ಳಿಯಲ್ಲಿ ನೀರಾವರಿ ಕೊಳವೆ ಬಾವಿಗಳಿಗೆ ವಿದ್ಯುತ್

2985:(3310-ಎ):

ಶ್ರೀ ಜೆ.ಸಿ.ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕನಾಯಕನಹಳ್ಳಿಯಲ್ಲಿ ಈ ವರ್ಷ ವಿದ್ಯುತ್ ಸರಬರಾಜು ಮಾಡಲು (ನೀರಾವರಿ ಕೊಳವೆ ಬಾವಿಗಳಿಗೆ) ಹಾಕಿಕೊಂಡಿರುವ ಗುರಿ ಎಷ್ಟು?

ಆ) ಎಷ್ಟು ವರ್ಷಗಳಿಂದ ಅಲ್ಲಿರುವ ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಸಲುವಾಗಿ ರೈತರು ಬೇಡಿದ ಅರ್ಜಿಗಳು ಬಾಕಿ ಇವೆ?

ಇ) ಕಳೆದ ಮೂರು ವರ್ಷಗಳಿಂದ ಕೆಇಬಿಯವರು ನಿಗದಿ ಮಾಡಿದ ಗುರಿಯಂತೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆಯೇ?

ಈ) ಹಾಗಿಲ್ಲದಿದ್ದಲ್ಲಿ ಜವಾಬ್ದಾರರು ಯಾರು; ಅವರ ವಿರುದ್ಧ ಕ್ರಮ ಜರುಗಿಸಲಾಗುವುದೇ?

ಉ) ಅಲ್ಲಿಂದ ಗುರಿ ನಿಗದಿಯಾದಂತೆ ಬ್ಯಾಕ್‌ಲಾಗ್ ಎಂದು ನಿರ್ಧರಿಸಿ ಈ ವರ್ಷದ ಗುರಿಯ ಜೊತೆಗೆ ಹಿಂದಿನಂತೆ ಗುರಿ ಇದ್ದವುಗಳಿಗೂ ಸ,ಪರ್ಕ ಕಲ್ಪಿಸಲು ಕ್ರಮ ಜರುಗಿಸಲಾಗುವುದೇ?

ಶ್ರೀ ಶರಣ ಬಸಪ್ಪ ದರ್ಶನಾಪುರ್ (ಇಂಧನ ರಾಜ್ಯ ಸಚಿವರು):

ಅ) ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಈ ವರ್ಷ (1998-99) ನೀರಾವರಿ ಪಂಪುಸೆಟ್ಟುಗಳ ವಿದ್ಯುದೀಕರಣಕ್ಕಾಗಿ ನಿಗದಿಪಡಿಸಿರುವ ಗುರಿ 780

ಆ) ಫೆಬ್ರವರಿ 94ರಿಂದ ನೀರಾವರಿ ಪಂಪುಸೆಟ್ಟುಗಳ ಅರ್ಜಿಗಳು ವಿದ್ಯುದೀಕರಣಕ್ಕಾಗಿ ಬಾಕಿ ಇರುತ್ತದೆ.

ಇ) ಕಳೆದ ಮೂರು ವರ್ಷಗಳ ಗುರಿ ಮತ್ತು ಸಾಧನೆಗಳ ವಿವರಗಳು ಈ ಕೆಳಕಂಡಂತಿವೆ.

	ಗುರಿ	ಸಾಧನೆ
1. 1995-96	610	414
2. 19996-97	610	599
3. 1997-98	400	693
ಒಟ್ಟು	1620	1706

ಈ) ಮಂಡಳಿಯಲ್ಲಿ ಕೈಗೆತ್ತಿಕೊಳ್ಳಲಾಗುವ ವಿವಿಧ ಕಾಮಗಾರಿಗಳ ಪ್ರಗತಿಯು ಮಂಡಳಿಯಲ್ಲಿ ಲಭ್ಯವಿರುವ ಸಿಬ್ಬಂದಿ, ಸಾಮಗ್ರಿಗಳ ಸರಬರಾಜು ಹಾಗೂ ಮಂಡಳಿಯ ಆರ್ಥಿಕ ಸಂಪನ್ಮೂಲಗಳನ್ನು ಅವಲಂಬಿಸಿದೆ. ಇವುಗಳಿಗೆ ಅನುಸಾರವಾಗಿ ಮೇಲಿನ ಪ್ರಗತಿಯನ್ನು ಸಾಧಿಸಲಾಗಿದೆ. ಆದಾಗ್ಯೂ, ಸದರೀ ತಾಲ್ಲೂಕಿಗೆ ಕಳೆದ ಮೂರು ವರ್ಷಗಳಲ್ಲಿ ನಿಗದಿಪಡಿಸಲಾದ ಒಟ್ಟು ಗುರಿಗೆ ಹೋಲಿಸಿದಾಗ ಈ ಮೂರು ವರ್ಷಗಳಲ್ಲಿ ಸಾಧಿಸಿರುವ ಒಟ್ಟು ಪ್ರಗತಿಯು ಅಧಿಕವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಜವಾಬ್ದಾರಿಯನ್ನು ನಿಗದಿಪಡಿಸುವ ಪ್ರಶ್ನೆಯು ಉದ್ಭವಿಸುವುದಿಲ್ಲ.

ಉ) ಸದರೀ ತಾಲ್ಲೂಕಿಗೆ ಕಳೆದ ಮೂರು ವರ್ಷಗಳಲ್ಲಿ ನಿಗದಿಪಡಿಸಿರುವ ಒಟ್ಟು ಗುರಿಯನ್ನು ಮೀರಿ ಹೆಚ್ಚಿನ ಪ್ರಗತಿಯನ್ನು ಸಾಧಿಸಿರುವುದರಿಂದ ಈ ವರ್ಷಗಳ ಗುರಿಯ 'ಬ್ಯಾಕ್ ಲಾಗ್' ಎಂಬ ಪ್ರಶ್ನೆಯು ಉದ್ಭವಿಸುವುದಿಲ್ಲ. ಆದರೆ, ಸದರೀ ತಾಲ್ಲೂಕಿನಲ್ಲಿ ವಿದ್ಯುತ್ ಸಂಪರ್ಕಕ್ಕಾಗಿ ಬಾಕಿ ಉಳಿದಿರುವ ಐ.ಪಿ.ಸೆಟ್ ಅರ್ಜಿಗಳನ್ನು ಹಾಗೂ ಹಿಂದಿನ ಸಾಲುಗಳಲ್ಲಿ ಸಾಧಿಸಿದ ಪ್ರಗತಿ ಇವುಗಳನ್ನು ಗಣನೆಗೆ ತೆಗೆದುಕೊಂಡು ಹಿಂದಿನ ಮೂರು ವರ್ಷಗಳಲ್ಲಿ ನಿಗಧಿಪಡಿಸಿರುವ ಗುರಿಗಿಂತಲೂ ಪ್ರಸಕ್ತ ಸಾಲಿನಲ್ಲಿ (1998-99) ಹೆಚ್ಚಿನ ಗುರಿಯನ್ನು ಅಂದರೆ, 780 ಐ.ಪಿ. ಸೆಟ್‌ಗಳಿಗೆ ವಿದ್ಯುತ್ ಸಂಪರ್ಕವನ್ನು ನೀಡುವ ಗುರಿಯನ್ನು ನಿಗದಿಪಡಿಸಲಾಗಿದೆ. ಹಿಂದಿನ ವರ್ಷಗಳಲ್ಲಿ ಕಾರ್ಯಾದೇಶವನ್ನು ನೀಡಿ ವಿದ್ಯುತ್ ಸಂಪರ್ಕವನ್ನು ನೀಡದೇ ಬಾಕಿ ಉಳಿದಿರುವ ಐ.ಪಿ. ಸೆಟ್ ಅರ್ಜಿದಾರರುಗಳಿಗೆ ನಿಗದಿಪಡಿಸಿರುವ ಗುರಿಗೆ ಅನುಗುಣವಾಗಿ, ಪ್ರಸ್ತುತ ಪಾಲಿಸಲಾಗುತ್ತಿರುವ ಆದ್ಯತಾ ಪಟ್ಟಿಯಲ್ಲಿನ ಜ್ಯೇಷ್ಠತೆಯ ಪ್ರಕಾರ ವಿದ್ಯುತ್ ಸಂಪರ್ಕವನ್ನು ನೀಡಲಾಗುತ್ತಿದೆ.

ತಿಪಟೂರು ತಾಲ್ಲೂಕಿನ ಹಳ್ಳಿಗಳು ಜಲಾವೃತವಾಗಿರುವುದು.

2986:(3994)

ಶ್ರೀ ಬಿ.ನಂಜಾಮರಿ, (ತಿಪಟೂರು): ಮಾನ್ಯ ಬೃಹತ್ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತಿಪಟೂರು ತಾಲ್ಲೂಕಿನಲ್ಲಿ ಹೇಮಾವತಿ ನೀರನ್ನು ನಾಲೆಯಲ್ಲಿ ಬಿಟ್ಟಿರುವುದರಿಂದ ಗಂಗನಘಟ್ಟ, ಸಾಸಲಹಳ್ಳಿ ಪರಿಶಿಷ್ಟ ಜಾತಿಯವರ ಕಾಲೋನಿ, ಬಜಗೂರು, ಬಳ್ಳೇಕೆರೆ, ಮತ್ತೀಘಟ್ಟ ಮತ್ತು ಕನ್ನುಘಟ್ಟ ಹಳ್ಳಿಗಳು ಜಲಾವೃತಗೊಂಡ ಕಾರಣ ಜನರಿಗೆ ನಷ್ಟವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸರ್ಕಾರದಿಂದ ಕೈಗೊಂಡಿರುವ ಪರಿಹಾರ ಕ್ರಮಗಳೇನು?